ಸಾಕ್ಷಿಯನ್ನು ದಿಃ **20.04.2021** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಬದಲಾಗಿ ನಾನು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಾನು ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ಸರಿ ಮತ್ತು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಾಖಲೆಗಳನ್ನು ಗುರುತಿಸುವ ಬಗ್ಗೆ ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ **ಎ.ಎಸ್.ಎಚ್** ರವರಿಂದಃ

ನಾನು ನಾಲ್ಕು ಪೋಟೋಗಳನ್ನು ಹಾಜರುಪಡಿಸುತ್ತಿದ್ದೇನೆ ಅವುಗಳನ್ನು ನಿಪಿ-**1** ರಿಂದ ನಿಪಿ-**4** ಎಂದು, ಸಿ.ಡಿ ಯನ್ನು ನಿಪಿ-**5** ಎಂದು, ಕಚ್ಚಾ ನಕಾಶೆಯನ್ನು ನಿಪಿ-**6** ಎಂದು, ತಿ.ನರಸೀಪುರ ಪುರಸಭೆ ನೀಡಿದ ಹಿಂಬರವನ್ನು ನಿಪಿ-**7** ಎಂದು, ಪುರಸಭೆ ನೀಡಿದ ಸ್ವೀಕೃತಿಯನ್ನು ನಿಪಿ-**8** ಎಂದು, ತಿ.ನರಸೀಪುರ ಪೊಲೀಸ್ ಠಾಣೆಗೆ ನೀಡಿದ ದೂರಿನ ಯಥಾ ನಕಲನ್ನು ನಿಪಿ-**9** ಎಂದು, ಸದರಿ ಪೊಲೀಸ್ ಠಾಣೆ ನೀಡಿದ ಸ್ವೀಕೃತಿಯನ್ನು ನಿಪಿ-**10** ಎಂದು, ಕಟ್ಟಡದ ಆಸ್ತಿ ಸ್ವಯಂ ನಿರ್ಧರಣ ನಮೂನೆಯನ್ನು ನಿಪಿ-**11** ಎಂದು, **2005-2006** ರ ಕಟ್ಟಡದ ಆಸ್ತಿ ಸ್ವಯಂ ನಿರ್ಧರಣ ನಮೂನೆಯನ್ನು ನಿಪಿ-**12** ಎಂದು, **Assessment** ನ ದೃಡೀಕೃತ ನಕಲನ್ನು ನಿಪಿ-**13** ಎಂದು, ತಿ.ನರಸೀಪುರ ಟೌನ್ ಪಂಚಾಯತಿ ನೀಡಿದ ಹಿಂಬರಹದ ದೃಡೀಕೃತ ನಕಲನ್ನು ನಿಪಿ-**14** ಎಂದು, **Assessment** ನ ದೃಡೀಕೃತ ನಕಲನ್ನು ನಿಪಿ-**15** ಎಂದು, ಎರಡು ಪಾರ್ಮ್ ನಂ.**3** ರ ದೃಡೀಕೃತ ನಕಲುಗಳನ್ನು ನಿಪಿ-**16** ಮತ್ತು ನಿಪಿ-**17** ಎಂದು, ದಿನಾಂಕ **04.07.2018** ರ ದಾನ ಪತ್ರದ ದೃಡೀಕೃತ ನಕಲನ್ನು ನಿಪಿ-**18** ಎಂದು, ಕಟ್ಟಡ ಪರವಾನಿಗೆಯ ದೃಡೀಕೃತ ನಕಲನ್ನು ನಿಪಿ-**19** ಎಂದು, ಋಣಭಾರ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ನಿಪಿ-**20** ಎಂದು, ಅಡಮಾನ ಪತ್ರದ ದೃಡೀಕೃತ ನಕಲನ್ನು ನಿಪಿ-**21** ಎಂದು, **2005-2006** ರ ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣ ನಮೂನೆಯನ್ನು ನಿಪಿ-**22** ಎಂದು, ಎರಡು ಕಂದಾಯ ಪಾವತಿ ರಸೀದಿಗಳನ್ನು ನಿಪಿ-**23** ಮತ್ತು ನಿಪಿ-**24** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

**ಸಿವಿಲ್ ನ್ಯಾಯಾಧೀಶರು,**

**ತಿ.ನರಸೀಪುರ.**